(ಆ) ಹೌದು

(ಇ) ಈ ಹೆಚ್ಚುವರಿ ಕ್ಷೇತ್ರಕ್ಕೆ ಜಂಟಿ ಸರ್ವೆ ಕೈಗೊಂಡಿದ್ದು ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಿ ಶೀಘ್ರವಾಗಿ ಪರಿಹಾರ ಧನ ವಿತರಿಸಲಾಗುವುದು. ಈ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆ ಬಗ್ಗೆ ಆಡಳಿತಾತ್ಮಕ ತೊಂದರೆ ಇದ್ದುದರಿಂದ ಪರಿಹಾರ ಧನ ನೀಡಲು ವಿಳಂಬವಾಗಿರುತ್ತದೆ.

(ಈ) ಭೂ ಕೋರಿಕೆ ಸಂಸ್ಥೆಯು ಹಿಪ್ಪರಗಿ ಯೋಜನೆಯಲ್ಲಿ ಮುಳುಗಡೆಯಾಗಿರುವ 39 ಗ್ರಾಮಗಳ ಹೆಚ್ಚುವರಿ ಜಮೀನುಗಳ ಒಟ್ಟು ಕ್ಷೇತ್ರ 844-04 ಎಕರೆ ಜಮೀನಿಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಅನುಮೋದನೆ ನೀಡಿರುವುದರ ಅನ್ವಯ ಹೆಚ್ಚುವರಿ ಜಮೀನನ್ನು ಭೂಸ್ವಾಧೀನಪಡಿಸಲು ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿತ್ತು. ಅದರಲ್ಲಿ ಜಮಖಂಡಿ ತಾಲ್ಲೂಕಿನ ಒಟ್ಟಾರೆ ಹೆಚ್ಚು ಕ್ಷೇತ್ರವಾದ 235-04 ಎಕರೆಗಳ ಪೈಕಿ ಹಿಪ್ಪರಗಿ ಗ್ರಾಮದ 23.24 ಎಕರೆ ಕ್ಷೇತ್ರಕ್ಕೆ ಕಲಂ 4(1) ಅಧಿಸೂಚನೆ ಹೊರಡಿಸಲಾಗಿತ್ತು.

ತದನಂತರ ಭೂ ಕೋರಿಕೆ ಸಂಸ್ಥೆಯು ಪ್ರಸ್ತುತ ಭೂಸ್ವಾಧೀನ ಪ್ರಕ್ರಿಯೆಯನ್ನು ತಡೆಹಿಡಿಯಲು ತಿಳಿಸಿದ್ದುದರಿಂದ ಹೆಚ್ಚುವರಿ ಕ್ಷೇತ್ರದ ಭೂಸ್ವಾಧೀನತೆಯನ್ನು ತಡೆಹಿಡಿಯಲಾಗಿರುತ್ತದೆ.

(ಉ) ಹೆಚ್ಚುವರಿ ಜಮೀನು ಭೂಸ್ವಾಧೀನ ಪ್ರಕ್ರಿಯೆ ತಡೆಹಿಡಿದಿದ್ದನ್ನು ತೆರವುಗೊಳಿಸಿದ ನಂತರ ತಕ್ಷಣ ಪ್ರಕ್ರಿಯೆಯನ್ನು ಪ್ರಾರಂಭಿಸಿ ಸಂತ್ರಸ್ಥ ಜನರಿಗೆ ಪರಿಹಾರ ಧನ ಸಂದಾಯ ಮಾಡಿ ಅವರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಲಾಗುವುದು.

255. **ಶ್ರೀ ಸುರೇಶ್ ಎಸ್. ಮಾರಿಹಾಳ (ಕಿತ್ತೂರು)**:- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2007-08ನೇ ಸಾಲಿನ ಬಜೆಟ್‌ನಲ್ಲಿ ಕಿತ್ತೂರು ಪ್ರಾಧಿಕಾರ ರಚನೆ ಮಾಡಿ ಘೋಷಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಗಮನಕ್ಕೆ ಬಂದಿದ್ದಲ್ಲಿ, ಇದುವರೆಗೆ ಸರ್ಕಾರ ಕೈಗೊಂಡ ಕ್ರಮವೇನು;

(ಇ) ಹಾಗಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು):–

(ಅ) ಹೌದು

(ಆ) ಪ್ರಾಧಿಕಾರ ರಚನೆಯ ಬಗ್ಗೆ ವರದಿ ತಯಾರಿಸಲಾಗುತ್ತಿದೆ

(ಇ) ವಿಶೇಷ ಅಧಿಕಾರಿಯ ನೇಮಕವಾಗಿರಲಿಲ್ಲ ಈಗ ಆಗಿದೆ.

784. **ಶ್ರೀ ಎಸ್. ಎಸ್. ಪಾಟೀಲ್ (ಮುಂಡರಗಿ):–** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮುಂಡರಗಿ ತಾಲ್ಲೂಕು, ಶಿಂಗಟಾಲೂರು ಏತ ನೀರಾವರಿ (ಹುಲುಗುಡ್ಡ) ಯೋಜನೆಗಾಗಿ ಭೂಸ್ವಾಧೀನಪಡಿಸಿಕೊಂಡ ರೈತರಿಗೆ ಭೂ ಪರಿಹಾರವನ್ನು ನೀಡಲಾಗಿದೆಯೇ;

(ಆ) ಹಾಗಿದ್ದಲ್ಲಿ ಪ್ರತಿ ಎಕರೆಗೆ ಯಾವ ದರದಲ್ಲಿ ಪರಿಹಾರ ನೀಡಲಾಗಿದೆ ಹಾಗೂ ಎಷ್ಟು ರೈತರಿಗೆ ಯಾವಾಗ ನೀಡಲಾಗಿದೆ (ವಿವರ ಒದಗಿಸುವುದು);

(ಇ) ಹಾಗಿಲ್ಲದಿದ್ದಲ್ಲಿ ಉಳಿದ ರೈತರಿಗೆ ಪರಿಹಾರ ನೀಡದಿರಲು ಕಾರಣಗಳೇನು? ಈ ರೈತರಿಗೆ ಯಾವಾಗ ಪರಿಹಾರವನ್ನು ನೀಡಲಾಗುವುದು;

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು):–

(ಅ) ಹೌದು

(ಆ) ಪ್ರತಿ ಎಕರೆ ಒಣಭೂಮಿಗೆ ರೂ. 1,05,300–00 ಒಂದು ಬೆಳೆ ತರಿ ಭೂಮಿಗೆ ಪ್ರತಿ ಎಕರೆಗೆ ರೂ. 1,75,500–00 ಹಾಗೂ ಎರಡು ಬೆಳೆ ತರಿ ಭೂಮಿಗೆ ಪ್ರತಿ ಎಕರೆಗೆ ರೂ. 2,23,300–00 ರಂತೆ ದಿನಾಂಕ 22–3–2007 ರಿಂದ 19–5–2007 ರ ವರೆಗೆ ಒಟ್ಟು 106 ರೈತರಿಗೆ ಪರಿಹಾರ ಧನ ನೀಡಲಾಗಿದೆ.

(ಇ) ಮುಂಡರಗಿ ತಾಲ್ಲೂಕಿನ ಹಮ್ಮಿಗಿ, ಗುಮ್ಮಗೋಳ ಮತ್ತು ಬಿದರಳ್ಳಿ ಗ್ರಾಮಗಳ ಜಮೀನುಗಳು ಇಂಟೆಕ್ ಕಾಲುವೆ ನಿರ್ಮಾಣ ಪುನರ್ ವಸತಿ ಹಾಗೂ ಹೆಚ್ಚುವರಿ ಕ್ಷೇತ್ರ ಭೂಸ್ವಾಧೀನಗೊಳಿಸುವ ಬಗ್ಗೆ ಒಟ್ಟು 10 ಪ್ರಕರಣಗಳು ಬಾಕಿ ಇದ್ದು ಈ ಪೈಕಿ 3 ಪ್ರಕರಣಗಳು ಪ್ರಾಥಮಿಕ ಹಂತದಲ್ಲಿ, 2 ಪ್ರಕರಣಗಳು, ಕಲಂ 5(ಎ) ವಿಚಾರಣೆ ಹಂತದಲ್ಲಿ ಮತ್ತು ಉಳಿದ 5 ಪ್ರಕರಣಗಳು ಐತೀರ್ಪು ವಿಚಾರಣೆ ಹಂತದಲ್ಲಿ ಇರುತ್ತದೆ. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಪರಿಹಾರ ಧನವನ್ನು ಶೀಘ್ರವಾಗಿ ವಿತರಿಸಲಾಗುವುದು.